ವಿಷ್ಣುದಾಸ ನಾಗೇಂದ್ರಾಚಾರ್ಯರ ಗಮನಕ್ಕೆ.... (೨)

ಅಸಾಧುತ್ವಶಂಕಾನಿರಾಸ ಎಂದರೆ ಸಾಧುತ್ವಸಮರ್ಥನೆ

ಪಿಡಿಎಫ್ ನಲ್ಲಿ ಅನುಪಯುಕ್ತ ವಿಷಯಗಳು ಕೆಲವು ಇವೆ. ಇರಲಿ. ಆಕ್ಷೇಪ ಇರುವುದು -

ಅಸಾಧುತ್ವಶಂಕೆಯೇ ಅನುಪಪನ್ನ ಎಂಬುದು ಸಾಧುತ್ವಸಮರ್ಥನೆ ಮಾಡುವುದಿಲ್ಲ ಎಂದು.

ಆದರೆ ಅಸಾಧುತ್ವಶಂಕಾನಿರಾಸದಿಂದ ಸಾಧುತ್ವಸಮರ್ಥನೆ ಆಗುತ್ತದೆ.

ಒಂದು ಕತೆ ನೋಡೋಣ.

ಒಂದು ಊರಿನಲ್ಲಿ ಯಜ್ಞದತ್ತನೆಂಬ ಬ್ರಾಹ್ಮಣನಿದ್ದನು.

ಆ ಊರಿಗೆ ದೇವದತ್ತ ಎಂಬ ಸದಾಚಾರನಿರತನಾದ (20 ವಯಸ್ಸಿನ) ಬ್ರಾಹ್ಮಣನು ಬಂದನು.

ದೇವದತ್ತನು ಸದಾಚಾರಿಯಾಗಿದ್ದದ್ದನ್ನು ಕಂಡು, ಯಜ್ಞದತ್ತನು ತನ್ನ ಮನೆಯ ಕಾರ್ಯಕ್ರಮಕ್ಕೆ ದೇವದತ್ತನಿಗೆ ಆಹ್ವಾನಕೊಡಲು ಹೊರಟನು.

ಅಷ್ಟೊತ್ತಿಗೆ ಒಂದು ವಾರ್ತೆ ಕೇಳಿಬಂತು -
30 ವರ್ಷದ ಹಿಂದೆ ದೇವದತ್ತನು ಮದ್ಯಪಾನ ಮಾಡಿದ್ದಾನೆ ಎಂದು.

ಆಗ ದೇವದತ್ತನಿಗೆ ಶಂಕೆ ಬಂದಿತು.
ದೇವದತ್ತನು ಸದಾಚಾರಿಯೇ? ಎಂದು.

ಮದ್ಯಪಾನ ಮಾಡಿ, ಅನಾಚಾರಿಯಾದ ದೇವದತ್ತನನ್ನು ಆಹ್ವಾನಿಸುವುದು ಬೇಡ ಎಂದು ಆಲೋಚಿಸಿದ.

ಇದಿಷ್ಟನ್ನು ದೇವದತ್ತನ ಮಿತ್ರನೊಬ್ಬ ನೋಡುತ್ತಾ ಕುಳಿತಿದ್ದ.
ಯಜ್ಞದತ್ತನು ಅವನ ಬಳಿ ಬಂದು, ತನ್ನ ಶಂಕೆ ಮುಂದಿಟ್ಟ.
ದೇವದತ್ತನು ಸದಾಚಾರಿಯೇ? ಎಂದು.

ಅದಕ್ಕೆ ಆ ಮಿತ್ರನು ಹೇಳಿದನು
ನಿನ್ನ ಶಂಕೆಯೇ ತಪ್ಪು.

ನೀನು ಯಾವ ದೇವದತ್ತನನ್ನು ಆಹ್ವಾನಿಸಲು ಹೊರಟಿರುವೆಯೋ, ಅವನು ಮದ್ಯಪಾನ ಮಾಡಿಲ್ಲ.

ದೇವದತ್ತ ಮದ್ಯಪಾನ ಮಾಡಿರುವುದು ನಿಜ.

ಆದರೆ ಅದು ಈ ದೇವದತ್ತನಲ್ಲ. ಯಾಕೆಂದರೆ ಮದ್ಯಪಾನ ಮಾಡಿರುವುದಾಗಿ ವಾರ್ತೆ ಬಂದಿರುವುದು ೩೦ ವರ್ಷದ ಹಿಂದೆ ನಡೆದದ್ದು.

ನೀನು ಆಹ್ವಾನಿಸಲು ಹೊರಟಿರುವ ದೇವದತ್ತನು ಆಗ ಹುಟ್ಟಿರಲೇ ಇಲ್ಲ. ಅವನಿಗಿನ್ನೂ ೨೦ ವರ್ಷ.
ಹಾಗಾಗಿ ದೇವದತ್ತನು ಸದಾಚಾರಿಯೇ? ಎಂಬ ಶಂಕೆಯೇ ಅನುಪಪನ್ನ ಎಂದು.

ಆಗ ಯಜ್ಞದತ್ತನ ಶಂಕಾನಿರಾಸವಾಯಿತು. ದೇವದತ್ತನು ಸದಾಚಾರಿ ಎಂದು ನಿಶ್ಚಯವಾಯಿತು.

ಯಜ್ಞದತ್ತನು ಆಹ್ವಾನಿಸುತ್ತಿರುವುದು ಸದಾಚಾರಿಯನ್ನು.

ಮೊದಲು ಆಹ್ವಾನಿಸಲು ಹೋಗಿ, ಮತ್ತೆ ಆಹ್ವಾನಿಸುವುದು ಬೇಡ ಎಂದುಕೊಂಡವನು, ಮತ್ತೆ ಆಹ್ವಾನಿಸಲು ಹೊರಟ.

ಮೊದಲು ಆಹ್ವಾನಿಸಲು ಹೊರಟಿದ್ದು ಯಾಕೆ?
ಸದಾಚಾರಿ ಎಂಬ ಕಾರಣಕ್ಕೆ.

ಆನಂತರ ಕೊನೆಗೆ ಆಹ್ವಾನಿಸಲು ಹೊರಟಿದ್ದು ಯಾಕೆ?
ಆಗಲೂ ಸದಾಚಾರಿ ಎಂಬ ಕಾರಣಕ್ಕೆ.

ಆದರೆ ಎರಡನೇಯ ಬಾರಿ ಆಹ್ವಾನಿಸಲು ಹೊರಟಾಗ "ದೇವದತ್ತನು ಸದಾಚಾರಿಯೇ ಆಗಿದ್ದಾನೆ" ಎಂಬ ನಿಶ್ಚಯವಾದದ್ದು ಹೇಗೆ?

ಅಸಾಧುತ್ವಶಂಕಾ ನಿವಾರಣೆ ಆಗಿದ್ದರಿಂದ ಅಲ್ಲವೇ?

ಒಂದು ವೇಳೆ ಶಂಕೆ ನಿರಾಸವಾಗದೇ ಇದ್ದಿದ್ದರೆ, "ದೇವದತ್ತನು ಸದಾಚಾರಿಯೇ ಆಗಿದ್ದಾನೆ" ಎಂಬುದಾಗಿ ಸಾಧುತ್ವ ಜ್ಞಾನ ಬರುತ್ತಿತ್ತೇ? ಇಲ್ಲ.

ವಸ್ತುತಃ ದೇವದತ್ತನು ಸದಾಚಾರಿ ಎಂಬುದು ಮೊದಲೇ ಸಿದ್ಧವಾಗಿದೆ. ಹಾಗಿದ್ದರೂ ಮದ್ಯಪಾಯಿತ್ವರೂಪ ಅಸಾಧುತ್ವ ಶಂಕೆ ಬಂದಿದ್ದರಿಂದ "ದೇವದತ್ತನು ಸದಾಚಾರಿಯೇ ಆಗಿದ್ದಾನೆ" ಎಂಬ ಸಾಧುತ್ವ ಜ್ಞಾನ ಬರಲಿಲ್ಲ.

ಬದಲಾಗಿ "ದೇವದತ್ತನು ಸದಾಚಾರಿಯಾಗಿರಲಿಕ್ಕಿಲ್ಲ" ಎಂದು ಅವನ ಬಗ್ಗೆ ಇದ್ದ ಸಾಧುತ್ವ ಜ್ಞಾನವು ಸಡಿಲವಾಗಲು ಆರಂಭಿಸಿತು.

ಯಾವಾಗ ಅಸಾಧುತ್ವ ಶಂಕೆ ನಿರಾಸವಾಯಿತೋ, ಆಗ ”ಇಲ್ಲ, ದೇವದತ್ತನು ಸದಾಚಾರಿಯಾಗಿರಲಿಕ್ಕಿಲ್ಲ ಎಂದು ನಾನು ತಿಳಿಯಬಾರದು. ಮೊದಲು ತಿಳಿದಂತೆ ಅವನು ಸದಾಚಾರಿಯೇ ಆಗಿದ್ದಾನೆ" ಎಂಬ ಸಾಧುತ್ವ ಜ್ಞಾನದ ಸಮರ್ಥನೆ ಆಯಿತು.

ತಡ ಮಾಡದೇ ದೇವದತ್ತನನ್ನು ಆಹ್ವಾನಿಸುತ್ತಾನೆ.

ಹಾಗಾಗಿ ಅಸಾಧುತ್ವಶಂಕಾನಿರಾಸದಿಂದ ಸಾಧುತ್ವಸಮರ್ಥನೆ ಆಗುತ್ತದೆ ಎಂಬುದು ತಿಳಿಯುತ್ತದೆ.

ಪ್ರತ್ಯೇಕವಾಗಿ ಮಿಥ್ಯಾ ಯಾಃ ಎಂಬ ಎರಡು ಪದಗಳು ಸಾಧುವಾದವುಗಳು ಎಂಬುದು ಮೊದಲೇ ಸಿದ್ಧವಾಗಿದೆ. ಹಾಗಿದ್ದರೂ ಮಿಥ್ಯಾಯಾಃಎಂದು ಆಚಾರ್ಯರು ಹೇಳಿದ್ದು ಅಸಾಧುವಲ್ಲವೇ? ಎಂದು ಶಂಕೆ ಬಂದಾಗ, ಆಚಾರ್ಯರು ಹೇಳಿದ್ದು ಸಾಧುವಾಗಿದೆ ಎಂಬ ಜ್ಞಾನ ಬರುವುದೇ? ಇಲ್ಲ.

ಯಾವಾಗ ಪದವಿಭಾಗಪ್ರದರ್ಶನದ ಮೂಲಕ ಅಸಾಧುತ್ವ ಶಂಕೆ ಹೋಗುವುದೋ, ಆಗ ಆಚಾರ್ಯರು ಹೇಳಿದ್ದು ಸಾಧುವೇ ಆಗಿದೆ ಎಂಬ ಜ್ಞಾನ ಬರುವುದು.

ಈ ಸಾಧುತ್ವಸಮರ್ಥನೆ ಅಸಾಧುತ್ವಶಂಕಾನಿರಾಸದಿಂದ ಆದದ್ದು.
ಹಾಗಾಗಿ ಯಾವುದೇ ಅನುಪಪತ್ತಿ ಇಲ್ಲ.

ಮತ್ತೊಂದು ದೃಷ್ಟಾಂತವನ್ನು ಶ್ರೀಜಯತೀರ್ಥಗುರುಸಾರ್ವಭೌಮರ ವಾಕ್ಯದಿಂದ ತಿಳಿಯೋಣ.

ಆಚಾರ್ಯರು ಗೀತಾಭಾಷ್ಯದ ಆರಂಭದಲ್ಲಿ ..ಲೋಕಕೃಪಾಲುಭಿಃ.. ಎಂದು 'ಕೃಪಾಲು' ಎಂಬ ಶಬ್ದವನ್ನು ಬಳಸಿದ್ದಾರೆ.

ಪಾಣಿನಿವ್ಯಾಕರಣದ ಪ್ರಕಾರ ಕೃಪಾಲು ಶಬ್ದ ಅಪಶಬ್ದ. ಅದರ ಸಾಧುತ್ವವನ್ನು ಟೀಕಾಚಾರ್ಯರು ಪ್ರಮೇಯದೀಪಿಕಾದಲ್ಲಿ ಸಮರ್ಥನೆ ಮಾಡುತ್ತಾರೆ. –

...ಲೋಕೇ ವಿಷಯೇ ಕೃಪಾಲುಭಿಃ । ಯದ್ಯಪಿ 'ಸ್ಪೃಹಿಗೃಹಿ' ಇತ್ಯಾದಿನಾ ಕೃಪೇರಾಲುಚ್ ಪ್ರತ್ಯಯೋ ನ ವಿಹಿತಃ । ತಥಾಪಿ ವ್ಯಾಕರಣಾಂತರಬಲಾದವಗಂತವ್ಯಃ । ಕಲಶವಾಚೀ ವಾ ಆಲುಶಬ್ದಃ ।

ಎಂದು ಕೃಪಾಲು ಶಬ್ದ ಅಸಾಧು ಎಂಬ ಆಕ್ಷೇಪಕ್ಕೆ ಎರಡು ರೀತಿಯ ಪರಿಹಾರವನ್ನು ಕೊಟ್ಟಿದ್ದಾರೆ.

ಒಂದು - ಬೇರೆ ವ್ಯಾಕರಣದ ಮೂಲಕ ಅಸಾಧುತ್ವಶಂಕಾನಿರಾಕರಣೆ.

ಮತ್ತೊಂದು – ಅಲ್ಲಿ ಆಲುಚ್ ಪ್ರತ್ಯಯವೇ ಇಲ್ಲ, ಕೃಪಾ ಆಲು ಎಂದು ಎರಡು ಶಬ್ದಗಳಿವೆ ಎಂದು ಹೇಳುವ ಮೂಲಕ ಅಸಾಧುತ್ವಶಂಕಾನಿರಾಕಣೆ.

ಇಲ್ಲಿ ಗಮನಿಸಬೇಕಾದ ಅಂಶ.

ಅಸಾಧುತ್ವ ಶಂಕಾ ನಿವಾರಣೆಗಾಗಿ, ಎರಡನೇಯ ಉಪಾಯ ಹೇಳುವಾಗ ಕೃಪಾಲು ಎಂಬಲ್ಲಿ ಎರಡು ಶಬ್ದಗಳನ್ನಾಗಿ ತಿಳಿಸಿದ್ದಾರೆ. ಆಲುಚ್ ಪ್ರತ್ಯಯದ ವಿಷಯವೇ ಇಲ್ಲ.

ಹಾಗಾಗಿ ಆಲುಚ್ ಪ್ರತ್ಯಯವನ್ನು ಹಾಕಿದಾಗ ಮಾತ್ರ ಕೃಪಾಲು ಎಂಬುದು ಅಪಶಬ್ದ ಎಂಬುದಾಗಿ ಅಸಾಧುತ್ವದ ಶಂಕೆಗೆ ಅವಕಾಶ ಇದೆ. ಆಲುಚ್ ಪ್ರತ್ಯಯವೇ ಇಲ್ಲವೆಂದ ಮೇಲೆ ಅಸಾಧುತ್ವ ಶಂಕೆಗೆ ಅವಕಾಶವಿಲ್ಲ ಎಂದಾಯಿತು.

ಈಗ ಮಿಥ್ಯಾ ಯಾ ಎಂಬ ಪಕ್ಷದಲ್ಲಿ ಇವರು ಹೇಳಿದ ಹಾಗೆ ಹೇಳುವುದಾದರೆ -

'ಕೃಪಾಲು ಎಂಬಲ್ಲಿ ಕಲಶವಾಚೀ ಆಲು ಶಬ್ದ ಇದೆ' ಎಂದು ಹೇಳಿದ ಮಾರ್ಗವು, ಶಂಕೆಯೇ ಅನುಪಪನ್ನ ಎಂದು ಹೇಳುತ್ತಿದೆ. ಸಾಧುತ್ವ ಸಮರ್ಥನೆಯ ಪ್ರಸಕ್ತಿಯೇ ಇಲ್ಲ ಎಂದು ಹೇಳಬೇಕು.

ಇದನ್ನು ಜ್ಞಾನಿಗಳು ಒಪ್ಪುವರೇ?
ಇಲ್ಲ.

ಯಾಕಂದರೆ ಪ್ರಸಿದ್ಧ ವ್ಯಾಕರಣದ ಪ್ರಕಾರ ಸಾಧುತ್ವಸಮರ್ಥನೆಗಾಗಿಯೇ ಈ ಮಾರ್ಗವನ್ನು ತಿಳಿಸಿದ್ದು.

ಶ್ರೀಸುಮತೀಂದ್ರತೀರ್ಥರು ತಮ್ಮ ಭಾವರತ್ನಕೋಶದಲ್ಲಿ ಈ ಕಲಶವಾಚೀ ವಾ ಆಲುಶಬ್ದಃ ಎಂಬ ಟೀಕಾವಾಕ್ಯಕ್ಕೆ ಅವತಾರಿಕೆ ಬರೆಯುವಾಗ ಹೀಗೆ ಹೇಳಿದ್ದಾರೆ. –

ನನು ವ್ಯಾಕರಾಣಾಂತರಂ ನೇದಾನೀಂ ವ್ಯವಹಾರೋಪಯೋಗಿ । ಕಲೌ ಪರಾಶರಸ್ಮೃತೇರಿವ ಮುನಿತ್ರಯವ್ಯಾಕರಣಸ್ಯೈವ ಗ್ರಾಹ್ಯತಯಾ ಯಜ್ಞುಜ್ಞಪ್ರಕರಣೇ ಮನೋರಮಾದೌ ಸ್ಥಾಪಿತತ್ವಾದಿತ್ಯತಃ ಪಕ್ಷಾಂತರಮಾಹ – ಕಲಶೇತಿ ।

ನೋಡಿ, ಶಬ್ದ ಅಸಾಧು ಅಲ್ಲ ಸಾಧುವೇ ಆಗಿದೆ ಎಂಬುದಕ್ಕೆ ಮೊದಲಿಗೆ ಶ್ರೀಟೀಕಾಚಾರ್ಯರು ಬೇರೆ ವ್ಯಾಕರಣದ ಮೂಲಕ ಪರಿಹಾರ ಸೂಚಿಸಿದರು. ಆದರೆ ಆನಂತರ ಮತ್ತೊಂದು ರೀತಿಯ ಪರಿಹಾರದ ಪಕ್ಷವನ್ನು ತಿಳಿಸಿದ್ದಾರೆ. ಯಾಕಂದರೆ ಪಾಣಿನಿ ವ್ಯಾಕರಣವೇ ಪ್ರಸ್ತುತ ಲೋಕದಲ್ಲಿ ವ್ಯವಹಾರೋಪಯೋಗಿ. ಹಾಗಾಗಿ (ಬೇರೆ ವ್ಯಾಕರಣದ ವಿಷಯವನ್ನು ಬಿಟ್ಟು) ಬೇರೆ ರೀತಿಯಲ್ಲಿ ಅಂದರೆ ಪಾಣಿನಿ ವ್ಯಾಕರಣದಂತೆಯೇ ಕೃಪಾಲು ಶಬ್ದದ ಸಾಧುತ್ವ ಸಮರ್ಥನೆ ಮಾಡುತ್ತಿದ್ದಾರೆ ಎಂದು ಹೇಳಿದಂತಾಗಿದೆ

ಹಾಗಾಗಿ ಕೃಪಾ ಆಲು ಎಂಬ ಪಕ್ಷದಲ್ಲಿ ಆಲುಚ್ ಪ್ರತ್ಯಯವೇ ಇಲ್ಲದಿರುವುದರಿಂದ, ಈ ಪಕ್ಷವು - ಶಂಕೆಯೇ ಅನುಪಪನ್ನ ಎಂದು ಅಸಾಧುತ್ವಶಂಕಾನಿರಾಸ ಮಾತ್ರ ಮಾಡುವುದೋ, ಅಥವಾ ಸಾಧುತ್ವಸಮರ್ಥನೆಯನ್ನು ಮಾಡುವುದೋ?  ಅಸಾಧುತ್ವಶಂಕಾನಿರಾಸ ಮಾಡುವುದರ ಜೊತೆಗೆ ಸಾಧುತ್ವವನ್ನು ಸಮರ್ಥನೆ ಮಾಡುವುದು.

ಇವರೇ ಹೇಳುವಂತೆ, ಕೃಪಾ ಆಲು ಎಂಬಲ್ಲಿ ಅಸಾಧುತ್ವಶಂಕೆಯೇ ತಪ್ಪು. ಯಾಕಂದರೆ ಈ ಮಾರ್ಗದಲ್ಲಿ ಆಲುಚ್ ಪ್ರತ್ಯಯವೇ ಇಲ್ಲ. ಹಾಗಾಗಿ ಶಂಕೆಯೇ ತಪ್ಪು. ಆದರೆ ಈ ಮಾರ್ಗ ಕೇವಲ ಶಂಕೆ ತಪ್ಪು ಎಂದಷ್ಟೇ ಹೇಳುವುದಿಲ್ಲ. ಜೊತೆಗೆ ಅದರ ಸಾಧುತ್ವವನ್ನು ಸಮರ್ಥನೆ ಮಾಡುವುದು.

ಅದೇ ರೀತಿ ಮಿಥ್ಯಾ ಯಾಃ ಎಂಬಲ್ಲಿ ಶಂಕೆಯೇ ತಪ್ಪು. ಯಾಕಂದರೆ ಈ ಮಾರ್ಗದಲ್ಲಿ ಒಂದೇ ಪದವಲ್ಲ. ಹಾಗಾಗಿ ಶಂಕೆಯೇ ತಪ್ಪು. ಆದರೆ ಈ ಮಾರ್ಗ ಕೇವಲ ಶಂಕೆ ತಪ್ಪು ಎಂದಷ್ಟೇ ಹೇಳುವುದಿಲ್ಲ. ಜೊತೆಗೆ ಅದರ ಸಾಧುತ್ವವನ್ನು ಸಮರ್ಥನೆ ಮಾಡುವುದು.

ಅಲ್ಲಿ ಆಲುಚ್ ಪ್ರತ್ಯಯ ಇದೆ ಎಂದು ತಿಳಿದದ್ದು ಅಸಾಧುತ್ವ ಶಂಕೆಗೆ ಕಾರಣ.

ಇಲ್ಲಿ ಒಂದೇ ಪದ ಎಂದು ತಿಳಿದದ್ದು ಅಸಾಧುತ್ವ ಶಂಕೆಗೆ ಕಾರಣ.

ಅಲ್ಲಿ ಕಲಶವಾಚೀ ಎಂಬುದರ ಮೂಲಕ ಸಾಧುತ್ವಸಮರ್ಥನೆ

ಇಲ್ಲಿ ಯಾಃ ವಾಚಃ ಎಂಬುದರ ಮೂಲಕ ಸಾಧುತ್ವಸಮರ್ಥನೆ.

ಹಾಗಾದರೆ ಇಲ್ಲಿ ಇನ್ನೊಂದು ಪ್ರಶ್ನೆ ಬರಬಹುದು.

ಅಲ್ಲಿಗೂ ಇಲ್ಲಿಗೂ ವ್ಯತ್ಯಾಸ ಇದೆ.
ಮಿಥ್ಯಾ ಯಾಃ ಎಂಬಲ್ಲಿ ಕೇವಲ ಪದಗಳು ಬೇರೆ ಎಂದು ಹೇಳಿದ್ದು. ಇಲ್ಲಿ ಕೃಪಾ ಆಲು ಎರಡು ಶಬ್ದಗಳು ಎಂದು ಹೇಳುವುದರ ಜೊತೆಗೆ ಆಲು ಶಬ್ದಕ್ಕೆ ಕಲಶ ಎಂದು ಅರ್ಥವನ್ನೂ ಹೇಳಿದ್ದಾರೆ. ಹಾಗಾಗಿ ವ್ಯತ್ಯಾಸ ಇದೆ ಎಂದು. ಹೀಗೆ ಶಂಕಿಸುವಂತಿಲ್ಲ.

ಯಾಕಂದರೆ ಅಲ್ಲಿ ಕೃಪಾ ಆಲು ಎಂಬಲ್ಲಿ ಆಲು ಎಂದರೆ ಏನೆಂದು ಪ್ರಸಿದ್ಧವಾಗಿಲ್ಲ. ಹಾಗಾಗಿ ಕಲಶವಾಚೀ ಎಂದು ಅದರ ವಿವರಣೆ ಕೊಟ್ಟರು. ಇಲ್ಲಿ ಯಾಃ ಎಂಬುದು ಪ್ರಥಮಾ ಬಹುವಚನ ಎಂಬುದು ಪ್ರಸಿದ್ಧವಾಗಿ ತಿಳಿದಿದೆ. ಹಾಗಾಗಿ ಅನ್ವಯ ತೋರಿಸಿದರು.

ಇಲ್ಲಿಯೂ ಯಾಃ ವಾಚಃ ಎಂದು ಹೇಳುವ ಮೂಲಕ ವಿವರಿಸಿದ್ದಾರೆ.

ಇದೇರೀತಿ ಶ್ರೀರಾಘವೇಂದ್ರಗುರುಸಾರ್ವಭೌಮರು ತತ್ವಪ್ರಾಕಾಶಿಕಾಕ್ಕೆ ಭಾವದೀಪ ಎಂಬ ವ್ಯಾಖ್ಯಾನವನ್ನು ಬರೆದಿದ್ದಾರೆ. ಅದರಲ್ಲಿ ಕೃಪಾಲು ಶಬ್ದದ ಸಾಧುತ್ವ ತಿಳಿಸುವಾಗ ಮತ್ತೊಂದು ರೀತಿಯ ಮಾರ್ಗ ತಿಳಿಸಿದ್ದಾರೆ.
_

ಕೃಪಾಂ ಲಾತಿ ಆದತ್ತ ಇತಿ ಕೃಪಾಪದೋಪಪದಾಲ್ಲಾ ಆದಾನ ಇತಿ ಧಾತೋಃ ಡುಪ್ರತ್ಯಯೇ ವಾ ಕೃಪಾಲುರಿತಿ ರೂಪಮ್ । ಎಂದು

ಇಲ್ಲಿ ಶ್ರೀರಾಘವೇಂದ್ರಗುರುಸಾರ್ವಭೌಮರು ಕೃಪಾಲು ಶಬ್ದಕ್ಕೆ ತೋರಿದ ಮಾರ್ಗವು ಕೇವಲ ಅಸಾಧುತ್ವಶಂಕಾನಿವಾರಣೆ ಮಾತ್ರ ಮಾಡುವುದೋ? ಸಾಧುತ್ವಸಮರ್ಥನೆ ಮಾಡುವುದೋ?

ಎರಡನ್ನೂ ಮಾಡುವುದು.

ಹಾಗಾಗಿ ಅಸಾಧುತ್ವಶಂಕಾನಿರಾಸದಿಂದ ಸಾಧುತ್ವಸಮರ್ಥನೆ ಆಗುವುದು ಎಂಬುದು ಸ್ಪಷ್ಟವಾಗುತ್ತದೆ.

ಆದ್ದರಿಂದ ಮಿಥ್ಯಾ ಯಾಃ ಎಂಬುದು ಸಾಧುತ್ವದ ಸಮರ್ಥನೆಗೆ ಹೊರಟಿದೆ ಎಂದು ಹೇಳುವುದು ಸರಿಯೇ ಆಗಿದೆ ಎಂದು ತಿಳಿಯುತ್ತದೆ.

ಮತ್ತೊಮ್ಮೆ

ನನ್ನ ಕಳಕಳಿ ಇಷ್ಟೇ. ಮಾಧ್ವರ ಬಗ್ಗೆ ಪರಕೀಯರು ಆಡಿಕೊಳ್ಳುವುದಕ್ಕೆ ಮಾಧ್ವರೇ ಕಾರಣರಾಗುವುದು ಬೇಡ. ಹಾಗಾಗಿ ನಿಮ್ಮ ಸತ್ಯಾನ್ವೇಷಣೆಯನ್ನು ಅವಶ್ಯವಾಗಿ ಮಾಡಿ. ಪಬ್ಲಿಕ್ ನಲ್ಲಿ ಬೇಡ. ಎಂದು.

ಇದು ಮೀರಿ ನಿಮ್ಮಿಷ್ಟ.

ಹೃಷೀಕೇಶ ಮಠದ

॥ श्रीश्रीशभक्तो जयति मध्वो विध्वस्तसाध्वसः ॥